**All India Radio: Bangalore**
**National Bulletin In Kannada**
**12.01.2026 1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**12.01.2026 1.10 pm**

**<><><*><><<>**

ಮುಖ್ಯಾಂಶಗಳು

**೧. ಪ್ರಧಾನಮಂತ್ರಿ ನರೇಂದ್ರ ಮೋದಿ - ಜರ್ಮನ್ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ನಡುವೆ ಗಾಂಧಿನಗರದಲ್ಲಿ ನಿಯೋಗಮಟ್ಟದ ಮಾತುಕತೆ**

**೨. PSಐಗಿ ಅ-೬೨ ಯಿಂದ ಉಡಾವಣೆಗೊಂಡ ರಾಕೆಟ್ ಇಔS-೦೧ ನಲ್ಲಿ ತಾಂತ್ರಿಕ ದೋಷ ; ಇಸ್ರೋದಿಂದ ದತ್ತಾಂಶ ವಿಶ್ಲೇಷಣೆ**

**೩. ಇಂದು ರಾಷ್ಟ್ರೀಯ ಯುವ ದಿನ ; ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಿ ಸೇರಿ ಗಣ್ಯರಿಂದ ಸ್ವಾಮಿ ವಿವೇಕಾನಂದರಿಗೆ ಗೌರವನಮನ**

**೪. ವಾಷಿಂಗ್ಟನ್‌ನಲ್ಲಿ ನಡೆಯಲಿರುವ ಜಿ-೭ ರಾಷ್ಟ್ರಗಳ ನಿರ್ಣಾಯಕ ಖನಿಜಗಳ ಸಚಿವರ ಸಭೆಯಲ್ಲಿ ಅಶ್ವಿನಿ ವೈಷ್ಣವ್ ಭಾಗಿ**

**೫. ಮಹಿಳಾ ಪ್ರಿಮಿಯರ್ ಲೀಗ್ ಕ್ರಿಕೆಟ್ ; ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು-ಯುಪಿ ವಾರಿಯರ್ಸ್ ನಡುವೆ ಸೆಣಸು**

**<><><*><><<>**

ಪ್ರಧಾನಿ ನರೇಂದ್ರ ಮೋದಿ ಮತ್ತು ಜರ್ಮನ್ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಅವರೊಂದಿಗೆ ಗುಜರಾತ್‌ನ ಗಾಂಧೀನಗರದಲ್ಲಿ ನಿಯೋಗಮಟ್ಟದ ದ್ವಿಪಕ್ಷೀಯ ಮಾತುಕತೆ ನಡೆಯಿತು. ಉಭಯ ನಾಯಕರು ಹಲವು ವಲಯಗಳಲ್ಲಿ ದ್ವಿಪಕ್ಷೀಯ ಸಹಕಾರ ಸಂಬಂಧ ವೃದ್ಧಿ ಕುರಿತು ಸಮಾಲೋಚನೆ ನಡೆಸಿದರು. ಅವರು, ಇತ್ತೀಚೆಗೆ ೨೫ ವರ್ಷಗಳನ್ನು ಪೂರೈಸಿದ ಭಾರತ-ಜರ್ಮನಿ ಕಾರ್ಯತಂತ್ರಿಕ ಪಾಲುದಾರಿಕೆಯಲ್ಲಿನ ಪ್ರಗತಿಯನ್ನು ಪರಾಮರ್ಶಿಸಿದರು. ದ್ವಿಪಕ್ಷೀಯ ಚರ್ಚೆಯಲ್ಲಿ ವ್ಯಾಪಾರ, ಹೂಡಿಕೆ ಮತ್ತು ಉನ್ನತ-ಮಟ್ಟದ ತಂತ್ರಜ್ಞಾನದ ಮೇಲೆ ಹೆಚ್ಚಿನ ಗಮನ ಕೇಂದ್ರೀಕರಿಸಿರುವುದಲ್ಲದೇ ರಕ್ಷಣೆ, ಹಸಿರು ಸುಸ್ಥಿರ ಅಭಿವೃದ್ಧಿ ಮತ್ತು ವಿಜ್ಞಾನ ಮತ್ತು ಸಂಶೋಧನೆಯಲ್ಲಿ ನಿರ್ಣಾಯಕ ಪಾಲುದಾರಿಕೆ ಕುರಿತು ಚರ್ಚೆ ನಡೆದಿದೆ. ಅಲ್ಲದೇ ಉಭಯ ನಾಯಕರು ಪ್ರಾದೇಶಿಕ ಮತ್ತು ಜಾಗತಿಕ ಸಮಸ್ಯೆಗಳ ಕುರಿತು ವಿಚಾರ ವಿನಿಮಯ ಮಾಡಿಕೊಂಡರು. ನಂತರ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಉಭಯ ನಾಯಕರು

ಮಾತನಾಡಿದರು. ಈ ವೇಳೆ ಪ್ರಧಾನಿ ನರೇಂದ್ರ ಮೋದಿ, ಭಾರತ ಹಾಗೂ ಜರ್ಮನಿಯ ನಡುವಿನ ರಾಜನೈತಿಕ ಸಂಬಂಧಗಳು ೭೫ ವರ್ಷಗಳು ಪೂರೈಸುತ್ತಿರುವ ಸಂದರ್ಭದಲ್ಲಿ ಚಾನ್ಸೆಲರ್ ಮೆರ್ಜ್ ನೀಡಿರುವ ಈ ಭೇಟಿಯು ಕೇವಲ ಒಂದು ಮೈಲಿಗಲ್ಲು ಅಲ್ಲ. ಬದಲಿಗೆ ಇದು ಮಹತ್ವಾಕಾಂಕ್ಷೆಗಳು, ಪರಸ್ಪರ ವಿಶ್ವಾಸ ಹಾಗೂ ನಿರಂತರವಾಗಿ ಬಲಿಷ್ಠಗೊಳ್ಳುತ್ತಿರುವ ಸಹಯೋಗಗಳ ಪ್ರತೀಕವಾಗಿದೆ ಎಂದರು. ಉಭಯ ರಾಷ್ಟ್ರಗಳ ದ್ವಿಪಕ್ಷೀಯ ವ್ಯಾಪಾರ ಮೌಲ್ಯ ಈವರೆಗಿನ ಅಡಿಹಿಟ್ಟು ೫೦ ಬಿಲಿಯನ್ ಡಾಲರ್ ಅನ್ನು ದಾಟಿದೆ ಎಂದರು. ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಮತ್ತು ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಸಬರಮತಿ ಆಶ್ರಮಕ್ಕೆ ಭೇಟಿ ನೀಡಿ, ರಾಷ್ಟ್ರಪಿತ ಮಹಾತ್ಮಾಗಾಂಧಿಜೀಯವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು. ಬಳಿಕ ಉಭಯ ನಾಯಕರು ಅಹಮದಾಬಾದ್‌ನಲ್ಲಿ ನಡೆಯುತ್ತಿರುವ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವದಲ್ಲಿ ಭಾಗವಹಿಸಿದರು. ಪ್ರಧಾನಿ ನರೇಂದ್ರ ಮೋದಿಯವರ ಆಹ್ವಾನದ ಮೇರೆಗೆ ಜರ್ಮನಿಯ ಫೆಡರಲ್ ಚಾನ್ಸೆಲರ್ ಫ್ರೆಡ್ರಿಕ್ ಮೆರ್ಜ್ ಇಂದು ಭಾರತಕ್ಕೆ ಎರಡು ದಿನಗಳ ಅಧಿಕೃತ ಭೇಟಿ ಕೈಗೊಂಡಿದ್ದಾರೆ. ಚಾನ್ಸೆಲರ್ ಅವರ ಭಾರತದ ಮೊದಲ ಭೇಟಿ ಇದಾಗಿದೆ.

**<>><><*><><<>**

ಭೂ ವೀಕ್ಷಣಾ ಉಪಗ್ರಹ - ಇಔS-ಓ೧ ಮತ್ತು ಇತರ ೧೪ ವಾಣಿಜ್ಯ ಪೇಲೋಡ್‌ಗಳನ್ನು ಹೊತ್ತ PSಐಗಿ-ಅ೬೨ ನ ೬೪ನೇ ಮಿಷನ್, ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಇಂದು ಬೆಳಿಗ್ಗೆ ಉಡಾವಣೆಯಾದ ನಂತರ ಕಾರ್ಯಾಚರಣೆಯ ೩ನೇ ಹಂತದ ಕೊನೆಯಲ್ಲಿ ತಾಂತ್ರಿಕ ಸಮಸ್ಯೆ ಎದುರಿಸಿತು. ಈ ಕುರಿತು ಮಾಹಿತಿ ನೀಡಿರುವ ಇಸ್ರೋ ಅಧ್ಯಕ್ಷ ಡಾ. ವಿ. ನಾರಾಯಣನ್, PSಐಗಿ ಎರಡು ಘನ ಹಂತಗಳು ಮತ್ತು ಎರಡು ದ್ರವ ಹಂತಗಳನ್ನು ಒಳಗೊಂಡಿರುವ ನಾಲ್ಕು ಹಂತದ ಉಡಾವಣಾ ವಾಹಕವಾಗಿದೆ. ಮೂರನೇ ಹಂತದ ಅಂತ್ಯದವರೆಗೆ ಕಾರ್ಯಕ್ಷಮತೆ ನಿರೀಕ್ಷೆಯಂತೆ ಇತ್ತು. ಆದರೆ, ಮೂರನೇ ಹಂತದ ಅಂತ್ಯದ ವೇಳೆ, ವಾಹನದ ರೋಲ್ ರೇಟ್‌ಗಳಲ್ಲಿ ಅಡಚಣೆ ಕಂಡುಬಂದಿದೆ, ನಂತರ ವಾಹನ ಹಾರಾಟದ ನಿಗದಿತ ಮಾರ್ಗದಲ್ಲಿ ಚಲಿಸದಿರುವುದು ಕಂಡುಬಂದಿದೆ. ಹಾಗಾಗಿ ಪ್ರಸ್ತುತ ದತ್ತಾಂಶವನ್ನು ವಿಶ್ಲೇಷಿಸಲಾಗುತ್ತಿದೆ ಎಂದು ಹೇಳಿದ್ದಾರೆ..

**ಧ್ವನಿ: ಪಿಎಸ್‌ಎಲ್‌ವಿ ಇಸ್ರೋ (೨೧ ಸೆಕೆಂಡ್‌ಗಳು)**

**<>><><*><><<>**

ಇಂದು ರಾಷ್ಟ್ರೀಯ ಯುವ ದಿನ. ಇದು ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯಾಗಿದೆ. ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ನವದೆಹಲಿಯಲ್ಲಿಂದು ಸಂಜೆ ನಡೆಯುವ ವಿಕಸಿತ ಭಾರತ ಯುವ ನಾಯಕರ ಸಂವಾದ ೨೦೨೬ರ ಸಮಾರೋಪ ಸಮಾರಂಭದಲ್ಲಿ

ಭಾಗವಹಿಸಲಿದ್ದಾರೆ.  ಅವರು ದೇಶಾದ್ಯಂತದ ಸುಮಾರು ಮೂರು ಸಾವಿರ ಯುವಕರೊಂದಿಗೆ ಮತ್ತು ಅಂತಾರಾಷ್ಟ್ರೀಯ ಅನಿವಾಸಿ ಭಾರತೀಯರನ್ನು ಪ್ರತಿನಿಧಿಸುವ ಯುವ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.  ಆಯ್ದ ಭಾಗವಹಿಸುವವರು ಹತ್ತು ವಿಷಯಗಳ ಕುರಿತು ಪ್ರಧಾನಿಗೆ ತಮ್ಮ ಅಂತಿಮ ಪ್ರಾತ್ಯಕ್ಷಿಕೆಗಳನ್ನು ಮಂಡಿಸಲಿದ್ದಾರೆ. ಯುವಜನಾಂಗದ ದೂರದೃಷ್ಟಿಗಳು ಮತ್ತು ರಾಷ್ಟ್ರೀಯ ಪ್ರಾಮುಖ್ಯತೆಯ ಪ್ರಮುಖ ಕ್ಷೇತ್ರಗಳ ಕುರಿತು ಕಾರ್ಯಸಾಧ್ಯವಾದ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ. ಇದೇ ವೇಳೆ ಭಾರತದ ಅಭಿವೃದ್ಧಿ ಆದ್ಯತೆಗಳು ಮತ್ತು ದೀರ್ಘಾವಧಿಯ ರಾಷ್ಟ್ರ ನಿರ್ಮಾಣ ಗುರಿಗಳ ಕುರಿತು ಯುವಜನಾಂಗ ಬರೆದ ಆಯ್ದ ಪ್ರಬಂಧಗಳನ್ನು ಒಳಗೊಂಡಿರುವ ವಿಕಸಿತ ಭಾರತ್ ಯುವ ನಾಯಕರ ಸಂವಾದ ೨೦೨೬ಗಾಗಿ ಪ್ರಬಂಧ ಸಂಕಲನವನ್ನು ಪ್ರಧಾನಿ ಬಿಡುಗಡೆ ಮಾಡಲಿದ್ದಾರೆ.

<>><><*><><<>

ಸ್ವಾಮಿ ವಿವೇಕಾನಂದರ ಜನ್ಮದಿನವನ್ನು ದೇಶಾದ್ಯಂತ ಇಂದು ರಾಷ್ಟ್ರೀಯ ಯುವದಿನವನ್ನಾಗಿ ಆಚರಿಸಲಾಗುತ್ತಿದ್ದು, ಅದರ ಅಂಗವಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಸೇರಿದಂತೆ ಹಲವು ಗಣ್ಯರು ಗೌರವನಮನ ಸಲ್ಲಿಸಿದ್ದಾರೆ. ರಾಷ್ಟ್ರಪತಿ ತಮ್ಮ ಸಂದೇಶದಲ್ಲಿ ಸ್ವಾಮಿ ವಿವೇಕಾನಂದರು ಅಪಾರ ವಿವೇಕವನ್ನು ಹೊಂದಿದ್ದರು. ಮತ್ತು  ಆತ್ಮ ಬಲ ಮತ್ತು ಮನುಕುಲದ ಸೇವಾ ಅಂಶಗಳನ್ನು ತಿಳಿಸುವ ಮೂಲಕ ಆಧ್ಯಾತ್ಮಿಕ ಜ್ಞಾನವನ್ನು ನೀಡಿದ್ದರು. ಇಡೀ ಜಗತ್ತಿಗೆ ಭಾರತದ ವಿವೇಕವನ್ನು ತೋರಿಸಿದವರು. ಜೊತೆಗೆ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಿಗೊಳಿಸಿದ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡುವಂತೆ ಯುವಜನತೆಗೆ ಪ್ರೇರಣೆ ನೀಡಿದ್ದರು ಎಂದು ಸ್ಮರಿಸಿದ್ದಾರೆ. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ತಮ್ಮ ಮಾಧ್ಯಮ ಪೋಸ್ಟ್‌ನಲ್ಲಿ ಸ್ವಾಮಿ ವಿವೇಕಾನಂದರ ಜೀವನ ಮತ್ತು ಬೋಧನೆಗಳಲ್ಲಿ ಅಂತಃಶಕ್ತಿ, ಶಿಸ್ತು ಹಾಗೂ ನಿಸ್ವಾರ್ಥ ಸೇವಾ ತತ್ವಗಳು ಒಳಗೊಂಡಿವೆ. ಅವರು ದೇಶದ ಯುವಶಕ್ತಿಗೆ ಸ್ಫೂರ್ತಿ ನೀಡುವ ಮೂಲಕ ದಾರಿದೀಪವಾಗಿದ್ದಾರೆ ಎಂದು ಹೇಳಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರು ವಿವೇಕಾನಂದರಿಗೆ ಗೌರವ ನಮನ ಸಲ್ಲಿಸಿದ್ದಾರೆ. ಅವರು ವಿವೇಕಾನಂದರು ಭಾರತದ ಯುವಶಕ್ತಿಗೆ ಸ್ಫೂರ್ತಿ ನೀಡುವ ಪ್ರಭಾವಿ ವ್ಯಕ್ತಿಯಾಗಿದ್ದಾರೆ. ವಿವೇಕಾನಂದರ ವ್ಯಕ್ತಿತ್ವ ಮತ್ತು ಅವರ ಕಾರ್ಯಗಳು ನಿರಂತರವಾಗಿ ಅಭಿವೃದ್ಧಿ ಹೊಂದಿದ ಭಾರತದ ಗುರಿ ಸಾಧನೆಗೆ ಹೊಸಶಕ್ತಿಯನ್ನು ನೀಡುತ್ತಾ ಬಂದಿವೆ. ಎಲ್ಲ ದೇಶವಾಸಿಗಳಿಗೆ ವಿಶೇಷವಾಗಿ ಯುವಜನತೆಗೆ ವಿವೇಕಾನಂದರ ಶಕ್ತಿ ಮತ್ತು ಆತ್ಮವಿಶ್ವಾಸ ಮತ್ತಷ್ಟು ಸ್ಫೂರ್ತಿ ನೀಡಲಿ ಎಂದು ಆಶಿಸಿದ್ದಾರೆ.

<>><><*><><<>

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ವಾಷಿಂಗ್ಟನ್‌ನಲ್ಲಿಂದು ನಡೆಯಲಿರುವ ಜಿ-೭ ರಾಷ್ಟ್ರಗಳ ನಿರ್ಣಾಯಕ ಖನಿಜಗಳ ಸಚಿವರ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಕಾರ್ಯತಾಂತ್ರಿಕ ಸಂಪನ್ಮೂಲಗಳ ಜಾಗತಿಕ ಪೂರೈಕೆ ಸರಣಿಯ ಸುರಕ್ಷಿತಗೊಳಿಸುವ ಉದ್ದೇಶದಿಂದ ಈ ಜಿ-೭ ರಾಷ್ಟ್ರಗಳ ನಿರ್ಣಾಯಕ ಖನಿಜಗಳ ಸಚಿವರ ಸಭೆ ಆಯೋಜಿಸಲಾಗಿದೆ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಸಚಿವ ಅಶ್ವಿನಿವೈಷ್ಣವ್ ವಿಕಸಿತ ಭಾರತ ದೂರದೃಷ್ಟಿಯ ಸಾಕಾರಕ್ಕೆ ನಿರ್ಣಾಯಕ ಖನಿಜಗಳ ಪೂರೈಕೆ ಸರಣಿಯನ್ನು ಭದ್ರಗೊಳಿಸುವುದು ಅತ್ಯಗತ್ಯ. ಈ ಸಭೆಯಲ್ಲಿ ಆಸ್ಟ್ರೇಲಿಯಾ ಸೇರಿದಂತೆ ೭ ಪ್ರಮುಖ ರಾಷ್ಟ್ರಗಳ ಸಚಿವರು ಭಾಗವಹಿಸಲಿದ್ದು, ಸಭೆಯಲ್ಲಿ ಲಿಥಿಯಮ್, ಕೊಬಾಲ್ಟ್, ಗ್ರಾಫೈಟ್, ತಾಮ್ರ ಮತ್ತು ಅಪರೂಪದ ಖನಿಜಗಳ, ಶೋಧಕಾರ್ಯ, ಸಂಗ್ರಹ ಹಾಗೂ ಸಂರಕ್ಷಣೆ ಕುರಿತಂತೆ ಚರ್ಚೆ ನಡೆಸಲಾಗುವುದು ಎಂದು ಹೇಳಿದ್ದಾರೆ.

**<>><><*><><<>**

ಪ್ರಧಾನಮಂತ್ರಿಗಳ ಮಹತ್ವಾಕಾಂಕ್ಷೆಯ ಸಕ್ರಿಯ ಆಡಳಿತ ಮತ್ತು ಸಕಾಲಿಕ ಅನುಷ್ಠಾನ-ಪ್ರಗತಿ ತನ್ನ ೫೦ನೇ ಸಭೆಯನ್ನು ಯಶಸ್ವಿಯಾಗಿ ನಡೆಸುವ ಮೂಲಕ ಮಹತ್ವದ ಮೈಲಿಗಲ್ಲು ದಾಟಿದೆ. ಪ್ರಮುಖ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳ ಮೇಲ್ವಿಚಾರಣೆ ಮತ್ತು ಸಾರ್ವಜನಿಕ ಕುಂದುಕೊರತೆ ನಿವಾರಣೆಗೆ ಒತ್ತು ನೀಡಲು ೨೦೧೫ರಲ್ಲಿ ಪ್ರಧಾನಿ ನರೇಂದ್ರಮೋದಿಯವರು ಪ್ರಗತಿ ಸಭೆಗೆ ಚಾಲನೆ ನೀಡಿದ್ದರು. ಕಳೆದೊಂದು ದಶಕದಲ್ಲಿ ಇದು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಮಹತ್ವದ ಪರಿವರ್ತನೆಗಳನ್ನು ತಂದಿದೆ. ಅದರಡಿ ಇಂದು ಆಕಾಶವಾಣಿ ವಿಶೇಷ ಸರಣಿಯಲ್ಲಿ ನಾಗ್ಪುರದ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ-ಏಮ್ಸ್ ಸ್ಥಾಪನೆ ಕುರಿತ ಒಂದು ವರದಿ :

**ಧ್ವನಿ : ಸುಗುಣಾ ಸತೀಶ್ (೧.೧೩. ಸೆಕೆಂಡಗಳು)**

ನಾಗ್ಪುರದಲ್ಲಿ ಏಮ್ಸ್ ಸ್ಥಾಪನೆ ಒಂದು ಮಹತ್ವದ ಕಾರ್ಯವಾಗಿದ್ದು, ಇದರಿಂದ ಮಹಾರಾಷ್ಟ್ರದ ಪೂರ್ವಭಾಗದಲ್ಲಿ ಅದರಲ್ಲೂ ವಿಶೇಷವಾಗಿ ಹಿಂದುಳಿದ ವಿದರ್ಭ ಪ್ರಾಂತ್ಯದ ಜನರಿಗೆ ಅತ್ಯಾಧುನಿಕ ವೈದ್ಯಕೀಯ ಸೌಕರ್ಯಗಳು ದೊರಕುವಂತಾಗಿದೆ. ೨೦೧೫ರ ಅಕ್ಟೋಬರ್‌ನಲ್ಲಿ ಆರಂಭವಾದ ಈ ಯೋಜನೆಯು ಒಂದು ಸಾವಿರದ ೫೭೭ ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಮುಖ ಆರೋಗ್ಯ ರಕ್ಷಣಾ ಮೂಲಸೌಕರ್ಯ ಅಭಿವೃದ್ಧಿ ಕಾರ್ಯವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು, ೨೦೧೭ರ ಆಗಸ್ಟ್‌ನಲ್ಲಿ ನಡೆಸಿದ ಪ್ರಗತಿ ಸಭೆಯಲ್ಲಿ ಕಾಮಗಾರಿಯ ಕುರಿತು ಮೇಲ್ವಿಚಾರಣೆ ನಡೆಸಿದ್ದಲ್ಲದೇ ತ್ವರಿತ ಅನುಷ್ಠಾನಕ್ಕೆ ಸೂಚನೆ ನೀಡಿದ್ದರು. ಅದರಂತೆ ೨೦೨೧ರ ಡಿಸೆಂಬರ್ ವೇಳೆಗೆ ಯೋಜನೆಯ ಕಾಮಗಾರಿ ಪೂರ್ಣಗೊಂಡಿತ್ತು. ನಾಗ್ಪುರದಲ್ಲಿ ಏಮ್ಸ್ ಸ್ಥಾಪನೆ ಮಹಾರಾಷ್ಟ್ರದ

ಜನತೆಗೆ ಪ್ರಧಾನಿಯವರ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಪ್ರಾದೇಶಿಕ ಅಸಮತೋಲನ ನಿವಾರಣೆ ನಿಟ್ಟಿನಲ್ಲಿ ವಿಶ್ವದರ್ಜೆಯ ಆರೋಗ್ಯ ಸೌಕರ್ಯ ಒದಗಿಸುವ ಸಂಕಲ್ಪ ಸಾಕಾರವಾಗಿದೆ. ಇದೀಗ ನಾಗ್ಪುರ ಏಮ್ಸ್ ನಾಗ್ಪುರ ಜಿಲ್ಲೆಯ ೪೬.೫೩ ಲಕ್ಷ ಜನರು ಹಾಗೂ ವಿದರ್ಭ ಪ್ರಾಂತ್ಯದ ಒಟ್ಟಾರೆ ೧.೩ ಕೋಟಿ ಜನಸಂಖ್ಯೆಗೆ ಪ್ರಾಥಮಿಕ ಆರೋಗ್ಯ ಸೇವೆ ಒದಗಿಸುತ್ತಿದೆ. ಆ ಮೂಲಕ ಏಮ್ಸ್ ಆ ಭಾಗದ ಜನರಿಗೆ ಆರೋಗ್ಯ ಸಂಜೀವಿನಿಯಾಗಿ ಮಾರ್ಪಟ್ಟಿದೆ.

**<>><><*><><<>**

ಮಹಿಳಾ ಪ್ರಿಮಿಯರ್ ಕ್ರಿಕೆಟ್ ಲೀಗ್ ಪಂದ್ಯಾವಳಿಯ ೫ನೇ ಪಂದ್ಯ ಇಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಯುಪಿ ವಾರಿಯರ್ಸ್ ನಡುವೆ ನಡೆಯಲಿದೆ. ಪಂದ್ಯ ರಾತ್ರಿ ೭.೩೦ಕ್ಕೆ ನವಿಮುಂಬೈನ ಡಾ.ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. ನಿನ್ನೆ ನಡೆದ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ೪ ರನ್‌ಗಳ ಜಯಗಳಿಸಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧.೩೦ ಕ್ಕೆ ><><<>**